ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014-15 : ಜೂನ್ 18, 2014

ಪತ್ರಿಕಾ ಪ್ರಕಟಣೆ

## ಸಾಯುವವರೆಗೂ ವಿಜ್ಞಾನ ಕ್ಷೇತ್ರದಲ್ಲೇ ದುಡಿಯುವೆ : ಸಿ ಎನ್ ಆರ್ ರಾವ್

ಬೆಂಗಳೂರು, ಜೂನ್ 18 (ಕರ್ನಾಟಕ ವಾರ್ತೆ) :

ನಾನು ಸಾಯುವವರೆಗೂ ವಿಜ್ಞಾನ ಕ್ಷೇತ್ರದಲ್ಲೇ ದುಡಿಯುವೆ ಎಂದು ಹೆಸರಾಂತ ವಿಜ್ಞಾನಿ ಹಾಗೂ ವಿಶ್ವವಿಖ್ಯಾತ ರಸಾಯನಿಕ ಶಾಸ್ತ್ರಜ್ಞ ಭಾರತ ರತ್ನ ಪ್ರೊ ಸಿ ಎನ್ ಆರ್ ರಾವ್ ಅವರು ಹೇಳಿದರು.

ಭಾರತ ರತ್ನ ಪುರಸ್ಕೃತ ಪ್ರೊ ಸಿ ಎನ್ ಆರ್ ರಾವ್ ಅವರಿಗೆ ರಾಜ್ಯದ ಶಕ್ತಿ ಸೌಧ ವಿಧಾನ ಸೌಧದ ಔತಣ ಸಮಾರಂಭದಲ್ಲಿ ರಾಜ್ಯ ಸರ್ಕಾರ ಇಲ್ಲಿ ಇಂದು ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಕೃತಜ್ಞತಾ ಭಾಷಣ ಮಾಡಿದ ಅವರು ಭಾರತ ದೇಶ ಮುಂದೆ ಬರಬೇಕು ತಮ್ಮ ಜೀವಿತಾವಧಿಯಲ್ಲಿನ ಮಹದಾಸೆಯಾಗಿದೆ. ತಮ್ಮ ಈ ಕನಸು ಮುಂದಿನ ಹತ್ತು ವರ್ಷಗಳೊಳಗಾದರೂ ನನಸಾಗಲೇ ಬೇಕು. ಅದನ್ನು ನೋಡುವ ಸೌಭಾಗ್ಯ ನನಗೆ ದೊರೆಯಬೇಕು ಎಂದು ಭಾವುಕರಾಗಿ ನುಡಿದರು.

ಪ್ರೊ ರಾವ್ ಅವರ ಭಾವೋದ್ವೇಗದ ನುಡಿಗಳನ್ನು ಆಲಿಸಿದ ಕಿಕ್ಕಿರಿದ ಜನಸ್ತೋಮವಿದ್ದ ಸಭಾಂಗಣದಲ್ಲಿ ಕೆಲಕಾಲ ನಿಶ್ಯಬ್ಧತೆ ಆವರಿಸಿತು.

ವಿಶ್ವದಲ್ಲೇ ಅತ್ಯಂತ ಕಿರಿಯ ವಯೋಮಾನದವರು ಅತ್ಯಧಿಕ ಸಂಖ್ಯೆಯಲ್ಲಿರುವ ಭಾರತದಲ್ಲಿ ಶಿಕ್ಷಣ ಕ್ಷೇತ್ರಕ್ಕೆ, ಅದರಲ್ಲೂ ವಿಶೇಷವಾಗಿ ವಿಜ್ಞಾನ ಕ್ಷೇತ್ರಕ್ಕೆ ಆಧ್ಯತೆ ನೀಡಿದರೆ ಕೇವಲ ಭಾರತಕ್ಕೆ ಮಾತ್ರವಲ್ಲ, ವಿಶ್ವಕೇ ಒಳಿತಾಗುತ್ತದೆ ಎಂಬ ತಮ್ಮ ಹೃದಯಾಂತರಾಳದ ಮಾತುಗಳನ್ನು ಹೊರಗೆಡವಿದ ಪ್ರೊ ರಾವ್ ಅವರು ಸರ್ಕಾರಗಳು ಶಾಲಾ ಶಿಕ್ಷಣಕ್ಕೇ ಹೆಚ್ಚು ಆಧ್ಯತೆ ನೀಡಬೇಕು. ಅಮೇರಿಕಾ ಹಾಗೂ ಚೀನಾದಂತಹ ಮುಂದುವರೆದ ರಾಷ್ಟ್ರಗಳು ತಮ್ಮ ಒಟ್ಟು ದೇಶೀಯ ಉತ್ಪನ್ನದ ಕನಿಷ್ಠ ಶೇಕಡಾ 6 ರಷ್ಟು ಮೊತ್ತವನ್ನು ಶಿಕ್ಷಣ ರಂಗಕ್ಕೆ ವೆಚ್ಚ ಮಾಡುತ್ತಿವೆ. ನಮ್ಮಲ್ಲಿ ಶೇಕಡಾ 2 ರಷ್ಟು ಮೊತ್ತವನ್ನೂ ವೆಚ್ಚ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಬಾಲ್ಯದಲ್ಲಿ ತಮ್ಮ ತಂದೆ-ತಾಯಿ ನೀಡಿದ ಪ್ರೋತ್ಸಾಹವನ್ನು ಸ್ಮರಿಸಿದ ಪ್ರೊ ರಾವ್ ಅವರು ಮಕ್ಕಳ ಮನದ ಮೇಲೆ ಒತ್ತಡ ಹಾಕದೆ ಅವರ ಇಚ್ಛೆಗೆ ಅನುಗುಣವಾಗಿ ವ್ಯಾಸಂಗ ಮಾಡುವ ಸ್ವಾತಂತ್ರ್ಯ ನೀಡಬೇಕೆಂದು ಪಾಲಕ-ಪೋಷಕರಿಗೆ ಸಲಹೆ ಇತ್ತರು.

ಮಡದಿಗೆ ಮೆಚ್ಚುಗೆ !

ತಮ್ಮ ಸಾಧನೆಯಲ್ಲಿ ತಮ್ಮ ಅರ್ಧಾಂಗಿಯದೇ ಸಿಂಹ ಪಾಲು ! ಗೃಹ ಖಾತೆ ಮತ್ತು ಆಹಾರ ಖಾತೆ ಮಾತ್ರವಲ್ಲ, ಹಣಕಾಸು ಖಾತೆಯನ್ನೂ ಆಕೆಯೇ ಯಶಸ್ವಿಯಾಗಿ ನಿಭಾಯಿಸಿಕೊಂಡು ಬರುತ್ತಿದ್ದಾಳೆ. ಹೆಂಡತಿಯೊಂದಿಗೆ ಸದಾ ಜಗಳವಾಡುತ್ತಿದ್ದರೆ ಏನನ್ನೂ ಸಾಧಿಸಲಾಗದು. ಅದರಲ್ಲೂ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂಬ ಛಲವಿದ್ದರೆ ಸಂಸಾರದಲ್ಲಿ ಸಾಮರಸ್ಯ ಇರಬೇಕು ಎಂದು ತಿಳಿಸಿದ ಪ್ರೊ ರಾವ್ ಅವರು ಮನದಾಳದಿಂದಲೇ ತಮ್ಮ ಮಡದಿಯ ಬಗ್ಗೆ ಮೆಚ್ಚುಗೆ ಮಾತನಾಡಿದರು.

ಅಲ್ಲದೆ, ವಿಜ್ಞಾನ ಕ್ಷೇತ್ರದಲ್ಲಿ ಶ್ರಮಿಸುವವರಲ್ಲಿ ನಿಸ್ವಾರ್ಥ ಮನೋಭಾವವಿರಬೇಕು. ದುಡ್ಡು ಮಾಡುವ ಆಲೋಚನೆ ಇರುವವರು ವಿಜ್ಞಾನ ಕ್ಷೇತ್ರದಿಂದ ದೂರ ಉಳಿಯಬೇಕು ಎಂದು ಪ್ರೊ ರಾವ್ ಅವರು ಹಿತ ನುಡಿದರು.

ಕನ್ನಡದಲ್ಲಿ ವ್ಯಾಸಂಗ ಮಾಡಿದವರೂ ವಿಶ್ವ ಮಾನ್ಯತೆ ಗಳಿಸಬಹುದು !

ಈ ಮುನ್ನ, ಮಾತನಾಡಿದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು ಅವಿಭಜಿತ ಕೋಲಾರ ಜಿಲ್ಲೆಯಲ್ಲಿ, ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜನಿಸಿದ ಸರ್ ಎಂ ವಿಶ್ವೇಶ್ವರಯ್ಯ ಹಾಗೂ ಪ್ರೊ ಸಿ ಎನ್ ಆರ್ ರಾವ್ ಇಬ್ಬರೂ ಸರ್ಕಾರಿ ಶಾಲೆಯಲ್ಲೇ ಕಲಿತವರು, ಕನ್ನಡ ಮಾಧ್ಯಮದಲ್ಲೇ ವ್ಯಾಸಂಗ ಮಾಡಿದವರು. ಇಬ್ಬರೂ ಭಾರತ ರತ್ನ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಈ ಇಬ್ಬರು ಮಹನೀಯರೂ ವಿಜ್ಞಾನ ಕ್ಷೇತ್ರದಲ್ಲಿನ ಮಹತ್ಸಾಧನೆಯ ಮೂಲಕ ವಿಶ್ವ ಮಾನ್ಯತೆ ಗಳಿಸಿದ್ದಾರೆ. ಕನ್ನಡದಲ್ಲಿ ವ್ಯಾಸಂಗ ಮಾಡಿದವರೂ ವಿಶ್ವ ಮಾನ್ಯತೆ ಗಳಿಸಬಹುದು ಎಂಬುದನ್ನು ಸಾಬೀತುಪಡಿಸಿದ್ದಾರೆ. ಇದನ್ನು ಗಮನಿಸಿಯಾದರೂ ಬದುಕಿನಲ್ಲಿ ಉನ್ನತ ಸ್ಥಾನ ಗಳಿಸಲು ನಮ್ಮ ಕನ್ನಡ ಭಾಷೆಯಿಂದ ಸಾಧ್ಯ ಎಂಬುದನ್ನು ಪಾಲಕ-ಪೋಷಕರು ಅರ್ಥ ಮಾಡಿಕೊಂಡು ಆಂಗ್ಲ ಭಾಷಾ ವ್ಯಾಮೋಹ ಮತ್ತು ಭ್ರಮಾ ಲೋಕದಿಂದ ದೂರ ಉಳಿಯಬೇಕು ಎಂದರು.

ಪ್ರೊ ರಾವ್ ಅವರನ್ನು ಸನ್ಮಾನಿಸಿದ್ದು ತಮ್ಮಲ್ಲಿ ಧನ್ಯತಾಭಾವ ಮೂಡಿಸಿದೆ. ರಾಯರ ಈ ಸನ್ಮಾನವನ್ನು ನಾಡು ತನ್ನನ್ನು ತಾನೇ ಗೌರವಿಸಿಕೊಂಡಿದಂತಾಗಿದೆ ಎಂದು ಭಾವಿಸುವುದಾಗಿ ಶ್ರೀ ಸಿದ್ಧರಾಮಯ್ಯ ಅವರು ಬಣ್ಣಿಸಿದರು.

ನೊಬೆಲ್ ಪುರಸ್ಕಾರ ದೊರೆಯಲಿ

ರಾಸಾಯನಿಕ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆಗಳ ಸರಮಾಲೆಯನ್ನೇ ಸೃಷ್ಠಿಸಿರುವ ಪ್ರೊ ಸಿ ಎನ್ ಆರ್ ರಾವ್ ಅವರಿಗೆ ನೊಬೆಲ್ ಪುರಸ್ಕಾರವೂ ದೊರೆಯಲಿ ಎಂದು ಹಾರೈಸಿದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು ಮೂಢ ನಂಬಿಕೆಗಳು ಹಾಗೂ ಕಂದಾಚಾರಗಳಿಂದ ಎಲ್ಲರೂ ದೂರವಿರಬೇಕು. ವೈಜ್ಞಾನಿಕ ಮನೋಭಾನ ಹಾಗೂ ವೈಚಾರಿಕ ಚಿಂತನೆ ಎಲ್ಲರಲ್ಲೂ ಬೆಳೆಯಬೇಕು ಎಂದು ಆಶಿಸಿದರು.

ಮೂಲಭೂತ ಸೌಲಭ್ಯ, ವಾರ್ತಾ ಹಾಗೂ ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಅಧ್ಯಕ್ಷತೆವಹಿಸಿದ್ದ ಈ ಸಮಾರಂಭದಲ್ಲಿ ಪ್ರೊ ಸಿ ಎನ್ ಆರ್ ರಾವ್ ಅವರ ಕುರಿತ ಪುಸ್ತಕವನ್ನು ರಾಜ್ಯ ವಿಧಾನ ಸಭೆಯ ಸಭಾಧ್ಯಕ್ಷ ಶ್ರೀ ಕಾಗೋಡು ತಿಮ್ಮಪ್ಪ ಹಾಗೂ ಚಿತ್ರಿಕೆಯನ್ನು ರಾಜ್ಯ ವಿಧಾನ ಪರಿಷತ್ ಸಭಾಪತಿ ಶ್ರೀ ಡಿ. ಹೆಚ್. ಶಂಕರ ಮೂರ್ತಿ ಲೋಕಾರ್ಪಣೆ ಮಾಡಿದರು.

ಯೋಜನಾ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಶ್ರೀ ಎಸ್. ಆರ್. ಪಾಟೀಲ್, ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶ್ರೀಮತಿ ಉಮಾಶ್ರೀ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಶ್ರೀ ಯು. ಟಿ. ಖಾದರ್. ಸಮಾಜ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ, ಮೀನುಗಾರಿಕಾ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವ ಶ್ರೀ ಕೆ. ಅಭಯಚಂದ್ರ ಜೈನ್, ರಾಜ್ಯ ವಿಧಾನ ಸಭೆಯ ಉಪಾಧ್ಯಕ್ಷ ಶ್ರೀ ಎನ್. ಹೆಚ್. ಶಿವಶಂಕರ ರೆಡ್ಡಿ, ಹೆಸರಾಂತ ಬಾಹ್ಯಾಕಾಶ ವಿಜ್ಞಾನಿಗಳಾದ ಡಾ ಕೆ. ಕಸ್ತೂರಿ ರಂಗನ್ ಮತ್ತು ಡಾ ಯು. ಆರ್. ರಾವ್ ಅವರೂ ಸೇರಿದಂತೆ ಹಲವು ಗಣ್ಯರು ಈ ವಿಶೇಷ ಸಮಾರಂಭಕ್ಕೆ ಸಾಕ್ಷಿಯಾಗಿದ್ದರು.

*********

ಡಿ ಪಿ ಎಂ